CAREERINDIA

# CCE RR

**ಸಂಕೇತ ಸಂಖ್ಯೆ : 01-K** **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K** **Subject : First Language — KANNADA**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರು ಪುಸ್ತಕವು ಮೂರು ವಿಭಾಗಗಳನ್ನು ಹೊಂದಿದೆ.

ii) **ವಿಭಾಗ 'ಎ'**ಯಲ್ಲಿ ಗದ್ಯ, ಪದ್ಯ ಮತ್ತು ಪೋಷಕ ಅಧ್ಯಯನಗಳ 67 ಅಂಕಗಳ ಒಟ್ಟಾರೆ 30 ಪ್ರಶ್ನೆಗಳಿವೆ.

iii) **ವಿಭಾಗ 'ಬಿ'**ಯಲ್ಲಿ ವ್ಯಾಕರಣ, ಛಂದಸ್ಸು ಮತ್ತು ಅಲಂಕಾರಗಳ 20 ಅಂಕಗಳ ಒಟ್ಟಾರೆ 16 ಪ್ರಶ್ನೆಗಳಿವೆ.

iv) **ವಿಭಾಗ 'ಸಿ'**ಯಲ್ಲಿ ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲಗಳ 13 ಅಂಕಗಳ ಒಟ್ಟಾರೆ 3 ಪ್ರಶ್ನೆಗಳಿವೆ.

v) ಸೂಚನೆಗೆ ಅನುಸಾರ ಪ್ರತೀ ಪ್ರಶ್ನೆಗೂ ಉತ್ತರವನ್ನು, ಉತ್ತರಕ್ಕಾಗಿ ಮೀಸಲಿಟ್ಟ ಆಯಾ ಜಾಗದಲ್ಲೇ ಬರೆಯಬೇಕು.

vi) ಛಂದಸ್ಸನ್ನು ಹೊರತುಪಡಿಸಿ ಉಳಿದೆಲ್ಲೂ ಸೀಸದ ಕಡ್ಡಿ (ಪೆನ್ಸಿಲ್) ಯಲ್ಲಿ ಉತ್ತರ ಬರೆಯುವಂತಿಲ್ಲ. ಹಾಗೇನಾದರೂ ಬರೆದರೆ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

vii) ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಲಿ.

viii) ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ix) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

www.careerindia.com

CAREERINDIA



## ವಿಭಾಗ – ‘ಎ’

### (ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)

ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರಿಸಿ : $9 \times 1 = 9$

1. ಅಮೆರಿಕ, ಕೆನಡಾ ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಎಂದು ಏಕೆ ಹೇಳಿದ್ದಾರೆ ?

2. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು ?

3. ಕವಿ ಸಿದ್ಧಲಿಂಗಯ್ಯನವರು ಹೇಳಿದ ಮನೆಮಂಚಮ್ಮ ಯಾರು ?

4. ದುಷ್ಟಬುದ್ಧಿಯು ಹೊನ್ನಿನ ಕಳ್ಳತನದ ಆರೋಪವನ್ನು ಯಾರ ಮೇಲೆ ಹೊರಿಸಿದನು ?

5. ಹುಲಿಗೆ ಪರಮಾನಂದವಾಗಲು ಕಾರಣವೇನು ?

6. ವಚನಕಾರರು ಯಾವುದನ್ನು ಮರವನೇರಿದ ಮರ್ಕಟ ಎಂದಿದ್ದಾರೆ ?

7. ನಕುಲ–ಸಹದೇವರ ತಾಯಿಯ ಹೆಸರೇನು ?

8. ಮಾನವರ ನಡುವೆ ಯಾವಾಗ ಕಾದಾಟ ನಡೆಯುತ್ತದೆ ?

9. ಪಾರಿವಾಳಗಳು ಯಾವಾಗ ಆನಂದ ಅನುಭವಿಸುತ್ತವೆ ?

ಈ ಕೆಳಗಿನ ಪ್ರಶ್ನೆಗಳಿಗೆ ***ಮೂರು–ನಾಲ್ಕು*** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $10 \times 2 = 20$

10. ವಿಶ್ವೇಶ್ವರಯ್ಯನವರು ರಚಿಸಿದ ಸಾಹಿತ್ಯ ಕೃತಿಗಳನ್ನು ಹೆಸರಿಸಿ.

11. ದೇವನೂರು ಮಹಾದೇವರವರ ಪ್ರಕಾರ ಇಂದಲ್ಲ–ನಾಳೆ ಫಲ ಕೊಡುವ ಅಂಶಗಳಾವುವು ?

12. ಧರ್ಮಬುದ್ಧಿಗೆ ದುಷ್ಟಬುದ್ಧಿಯು ನೀಡಿದ ಸಲಹೆಗಳು ಯಾವುವು ?



www.careerindia.com

CAREERINDIA



13. ಹುಲಿಯು ಶಾನುಭೋಗರನ್ನು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು ?

14. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರದಾಸಿಮಯ್ಯನ ಅಭಿಪ್ರಾಯವೇನು ?

15. ಗಡಿಯ ಆಚೆ–ಈಚೆ ಜೀವಿಗಳು ಏಕೆ ಶವವಾದವು ?

16. ಡಾ॥ ಎಚ್. ನರಸಿಂಹಯ್ಯನವರ ಪ್ರಕಾರ ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ ?

17. ಭರತ ಚಕ್ರವರ್ತಿಗೆ ವೃಷಭಾಚಲದಲ್ಲಿ ತನ್ನ ಹೆಸರನ್ನು ಏಕೆ ಕೆತ್ತಿಸಲು ಸಾಧ್ಯವಾಗಲಿಲ್ಲ ?

18. ಸ್ವಾಮಿ ವಿವೇಕಾನಂದರು ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂದು ಅಭಿಪ್ರಾಯ ಪಡುತ್ತಾರೆ ?

19. ಕುಪ್ಪಸ ಎಂಬ ಅರ್ಥ ಬರಲು ಹೇಳಿದ ಒಗಟನ್ನು ಬರೆಯಿರಿ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 4 × 3 = 12

20. "ಜೀವನರಥಕ್ಕೆ ಒಗ್ಗಾಲಿಯ ಭೀತಿಯಿದೆ"

21. "ಈ ಮಾಡಿದ ಕಟ್ಟಳೆಯನು ಆವನೊಬ್ಬನು ಮೀಱಿದವನು ರಾಜದ್ರೋಹಿಯಪ್ಪನು"

22. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"

23. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

ಈ ಕೆಳಗಿನ ಕವಿಗಳ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6

24. ಗೊರೂರು ರಾಮಸ್ವಾಮಿ ಅಯ್ಯಂಗಾರ್

25. ಕುಮಾರ ವ್ಯಾಸ



www.careerindia.com

CAREERINDIA



26. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ನೀಲಮೇಘ ________________________________

________________________________

________________________________

________________________________ ಕಣ್ಣಾ

ಹಕ್ಕಿ ಹಾರುತಿದೆ ನೋಡಿದಿರಾ ?

**ಅಥವಾ**

ಯುಗ–ಯುಗಗಳ ________________________________

________________________________

________________________________

________________________________ ಹರಸಿ

ಹಕ್ಕಿ ಹಾರುತಿದೆ ನೋಡಿದಿರಾ ?

27. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 × 4 = 4

ಬಿದ್ದುದನ್ನು ಮೇಲೆಬ್ಬಿಸಿ ನಿಲಿಸಿ
ಹೊಸ ಭರವಸೆಗಳ ಕಟ್ಟೋಣ.
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ.

ಈ ಕೆಳಗಿನ ಪ್ರಶ್ನೆಗಳಿಗೆ **ಎಂಟು** ಅಥವಾ **ಹತ್ತು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

28. ಶ್ರೀರಾಮನ ಆಗಮನದಿಂದ ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?

29. ಧೃತರಾಷ್ಟ್ರನು ಮಗನಾದ ದುರ್ಯೋಧನನಿಗೆ ಸಂಧಿ ಮಾಡಿಕೊ ಎಂದು ಹೇಳಲು ಕಾರಣವೇನು ?

**ಅಥವಾ**

ಧೃತರಾಷ್ಟ್ರ–ಗಾಂಧಾರಿಯರು ಸಂಧಿಗಾಗಿ ದುರ್ಯೋಧನನ ಬಳಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

www.careerindia.com

CAREERINDIA



ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 2 × 2 = 4

30. ಮೇಲೆ ಆಕಾಶಕ್ಕೆ ಮುಖಮಾಡಿ ಬೆಳೆದ ಸದಾ ಹಸಿರಿನ ದಟ್ಟ ಕಾಡು, ಸೂರ್ಯನ ಸೆಕೆತಾಗದ ಕಾಲಡಿಯಲ್ಲಿ ಕತ್ತಲು ಕವಿದಿರುವ ಗೊಂಡಾರಣ್ಯ. ಜೇನು, ಜೀರುಂಡೆ, ಕೀಟ, ಪತಂಗಗಳಿಂದ ಹಿಡಿದು, ಕಾಡೆಮ್ಮೆ, ಮದ್ದಾನೆಗಳವರೆಗೂ ಅಸಂಖ್ಯ ಜೀವಕೋಟಿಗಳ ಆಶ್ರಯತಾಣ ಪಶ್ಚಿಮ ಘಟ್ಟ. ಧುಮ್ಮಿಕ್ಕುವ ಜಲಪಾತ, ಬಿಸಿ ನೀರಿನ ಬುಗ, ಹಿಮಶೀತಲ ಸರೋವರ, ಸೂಜಿಮೊನೆಯಂಥ ಶಿಖರ, ದುರ್ಗಮ ಪ್ರಪಾತವೇ ಮುಂತಾದ ಉಬ್ಬುತಗ್ಗಿನ ವೈಚಿತ್ರ್ಯಗಳ ಗುಡಾಣವಾಗಿದೆ. ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾದದ್ದು ಸ್ವಾತಂತ್ರ್ಯ ಬಂದ ಮೇಲೆ. ಒಂದು ಕಡೆ ಏರುತ್ತಿರುವ ಜನಸಂಖ್ಯೆಯಿಂದಾಗಿ ಕೃಷಿ ಭೂಮಿಯ ವಿಸ್ತರಣೆಗೆಂದು ರೈತರು ಅರಣ್ಯ ಕಡಿದು ಅತಿಕ್ರಮ ಸಾಗುವಳಿ ಆರಂಭಿಸಿದ್ದು. ಇನ್ನೊಂದು ಕಡೆ ಅರಣ್ಯಹುಟ್ಟುವಳಿಗಳಾದ ಮೆಣಸು, ದಾಲಚಿನ್ನಿ, ಜೇನು, ಧೂಪ, ದಂತ, ರಾಳ, ಬಗಿನೆ, ಬಿದಿರುಗಳಿಗೆ ಬೇಡಿಕೆ ಹೆಚ್ಚಾದ್ದರಿಂದ ಹಣದಾಸೆಗೆ ಕಾಡು ದೋಚುವವರ ಸಂಖ್ಯೆ ಹೆಚ್ಚಾದದ್ದು. ಇವೆಲ್ಲಕ್ಕಿಂತ ಹೆಚ್ಚಾಗಿ ದೇಶದ ಅಭಿವೃದ್ಧಿಗೆಂದು ಉದ್ದಿಮೆಗಳನ್ನು ಸ್ಥಾಪಿಸಿ ಖನಿಜ, ವಿದ್ಯುತ್ತಿಗೆಂದು ಸರಕಾರವೇ ಪಶ್ಚಿಮ ಘಟ್ಟಕ್ಕೆ ಲಗ್ಗೆ ಹಾಕಿದ್ದು. ಕಾಪಾಡಬೇಕಿದ್ದ ಮಾಲೀಕನೇ ತನ್ನ ನೂರು ತೋಳುಗಳಿಂದ ಕಾಡಿಗೆ ಕೊಡಲಿ ಬೀಸಿದ್ದು. ತಾನು ದೋಚುವುದಷ್ಟೇ ಅಲ್ಲದೇ, ದೋಚಲು ಸಿದ್ಧರಾದ ಖಾಸಗಿ ಉದ್ದಿಮೆದಾರರನ್ನಲ್ಲಿಗೆ ಕರೆದು ಕೊಡಲಿ, ಗುದ್ದಲಿ, ಸಿಡಿಮದ್ದು ನೀಡಿದ್ದು.

*ಪ್ರಶ್ನೆಗಳು :*

ಅ) ಪಶ್ಚಿಮಘಟ್ಟಗಳು ಹೇಗೆ ನಿರ್ನಾಮವಾಗುತ್ತಿವೆ ?

ಆ) ಪಶ್ಚಿಮಘಟ್ಟಗಳ ಸೌಂದರ್ಯವನ್ನು ಬಣ್ಣಿಸಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದುದನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಬರೆಯಿರಿ : 10 × 1 = 10

31. 'ಚಂದ್ರಾರ್ಕ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಗುಣ ಸಂಧಿ
(ಬಿ) ಸವರ್ಣದೀರ್ಘ ಸಂಧಿ
(ಸಿ) ಆದೇಶ ಸಂಧಿ
(ಡಿ) ವೃದ್ಧಿ ಸಂಧಿ



www.careerindia.com

CAREERINDIA



32. 'ಮಕ್ಕಳು ರಾಷ್ಟ್ರಗೀತೆಯನ್ನು ಹಾಡಿದರು.' ಈ ವಾಕ್ಯವು

(ಎ) ಮಿಶ್ರ ವಾಕ್ಯ (ಬಿ) ಪ್ರಶ್ನಾರ್ಥಕ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ಸಾಮಾನ್ಯ ವಾಕ್ಯ

33. 'ಅಂಕಿತನಾಮ' ಪದಕ್ಕೆ ಉದಾಹರಣೆಯಿದು

(ಎ) ವ್ಯಾಪಾರಿ (ಬಿ) ಪರ್ವತ

(ಸಿ) ಸಹದೇವ (ಡಿ) ವಿದ್ವಾಂಸ

34. 'ಮುಂಗೈ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ತತ್ಪುರುಷ (ಬಿ) ಕರ್ಮಧಾರಯ

(ಸಿ) ಅಂಶಿ (ಡಿ) ಬಹುವ್ರೀಹಿ

35. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

(ಎ) ವಿವರಣಾತ್ಮಕ ಚಿಹ್ನೆ (ಬಿ) ಉದ್ಧರಣ ಚಿಹ್ನೆ

(ಸಿ) ವಾಕ್ಯವೇಷ್ಟನ ಚಿಹ್ನೆ (ಡಿ) ಆವರಣ ಚಿಹ್ನೆ

36. ಹಳಗನ್ನಡದ ಪಂಚಮೀ ವಿಭಕ್ತಿ ಪ್ರತ್ಯಯವಿದು

(ಎ) ಅತ್ತಣಿಂ (ಬಿ) ಇಂ

(ಸಿ) ಅಂ (ಡಿ) ಒಳ್

37. 'ಚೌಕಾಷಿ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ

(ಎ) ಫಾರ್ಸಿ (ಬಿ) ಅರಬ್ಬಿ

(ಸಿ) ಪೋರ್ಚ್‌ಗೀಸ್ (ಡಿ) ಉರ್ದು



www.careerindia.com

CAREERINDIA



38. 'ಅಥವಾ' ಎಂಬ ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ

(ಎ) ಅನುಕರಣ (ಬಿ) ಸಂಬಂಧಾರ್ಥಕ

(ಸಿ) ಭಾವಸೂಚಕ (ಡಿ) ಕ್ರಿಯಾರ್ಥಕ

39. ಕೃದಂತಭಾವನಾಮಕ್ಕೆ ಉದಾಹರಣೆ

(ಎ) ಚೆಲುವಿಕೆ (ಬಿ) ರಾಮನಂತೆ

(ಸಿ) ಕನ್ನಡಿಗ (ಡಿ) ಉಡುಗೆ

40. ಕ್ರಿಯಾಪದದ ಮೂಲರೂಪವನ್ನು ಹೀಗೆಂದು ಕರೆಯುವರು

(ಎ) ನಾಮ ಪ್ರಕೃತಿ (ಬಿ) ಉಪಸರ್ಗ

(ಸಿ) ಧಾತು (ಡಿ) ಪ್ರತ್ಯಯ

ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ : $4 \times 1 = 4$

41. ಹುಳಹುಪ್ಪಡಿ : ಜೋಡುನುಡಿ :: ಒಬ್ಬೊಬ್ಬ : ........................ .

42. ಇಸವಾಸ : ವಿಶ್ವಾಸ :: ಇಲ್ಲದ್ದಂಗ : ........................ .

43. ಧಾತೃ : ದಾತಾರ :: ವಿಜ್ಞಾನ : ........................ .

44. ಅನುಮತಿಸು : ಸಮ್ಮತಿಸು :: ಉಪಾರ್ಜಿಸು : ........................ .

ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : $1 \times 3 = 3$

45. ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ

**ಅಥವಾ**

ಅತಿಕುಟಿಲಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ : $1 \times 3 = 3$

46. "ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ"

**ಅಥವಾ**

"ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ"

www.careerindia.com

CAREERINDIA



## ವಿಭಾಗ – 'ಸಿ'
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

47. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ***ಒಂದನ್ನು*** ವಿಸ್ತರಿಸಿ ಬರೆಯಿರಿ : $1 \times 3 = 3$

   * ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.
   * ಮಾತುಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.
   * ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.

48. ನಿಮ್ಮನ್ನು ಹುಬ್ಬಳ್ಳಿಯ ಪ್ರೇರಣಾ ಪ್ರೌಢಶಾಲೆಯ 'ಸುಪ್ರೀತ' ಎಂದು ಭಾವಿಸಿಕೊಂಡು, 'ಅಂತರ್‌ಶಾಲಾ ಪ್ರಬಂಧ ಸ್ಪರ್ಧೆ'ಯ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ವಿಜಯವಾಣಿ' ದಿನಪತ್ರಿಕೆಯ ಸಂಪಾದಕರಿಗೆ ಮನವಿಪತ್ರ ಬರೆಯಿರಿ. $1 \times 5 = 5$

   ***ಅಥವಾ***

   ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ 'ಚಂದನಾ' ಎಂದು ಭಾವಿಸಿಕೊಂಡು, ದಾವಣಗೆರೆಯ ಬಾಪೂಜಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸ್ನೇಹಿತೆ 'ವರ್ಷಾ'ಳಿಗೆ ನಿಮ್ಮ ವಾರ್ಷಿಕ ಪರೀಕ್ಷೆಯ ತಯಾರಿಯನ್ನು ವಿವರಿಸಿ ಪತ್ರ ಬರೆಯಿರಿ.

49. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ***ಒಂದನ್ನು*** ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

   * ರೈತರ ಆತ್ಮಹತ್ಯೆಗೆ ಕಾರಣಗಳು ಮತ್ತು ಪರಿಹಾರೋಪಾಯಗಳು
   * ಭಾವೈಕ್ಯತೆಯನ್ನು ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ
   * ಇಂದಿನ ಶಿಕ್ಷಣದಲ್ಲಿ ಚಟುವಟಿಕೆಗಳ ಪಾತ್ರ

www.careerindia.com